ನಾನು ನನ್ನ ಕೆಲಸಕ್ಕೆ ಮೊದಲ ಆದ್ಯತೆ ನೀಡಿದ್ದೆ, ಮನೆಯಲ್ಲಿ ಅನಾರೋಗ್ಯದ ಸಂದರ್ಭವನ್ನು ಹೊರತು ಪಡಿಸಿ. ನನ್ನ ಅನೇಕ ನಿಕಟ ಸಂಬಂಧಿಗಳ ಮದುವೆಗಳಿಗೂ ನಾನು ಹೋಗಿಲ್ಲ. ನನ್ನ ಇತ್ತೀಚಿನ ಪುಸ್ತಕಗಳ ಬಿಡುಗಡೆಗೂ ನಾನು ಹೋಗಲಾಗಿರಲಿಲ್ಲ! 2015ರ ಸೆಪ್ಟೆಂಬರ್ 6ರಂದು ನನ್ನ ಎರಡು ಪುಸ್ತಕಗಳು ಬಿಡುಗಡೆ ಆದವು. ಅಂದು ಭಾನುವಾರ, ಆದರೆ ಅದೇ ದಿನ, ರಕ್ಷಣಾ ಸಚಿವರು ನಮ್ಮ ಕಾರ್ಖಾನೆಗೆ ಭೇಟಿನೀಡಿದಾಗ ಕರ್ತವ್ಯದ ಕರೆಗೆ ಓಗೊಡಬೇಕಾಯಿತು. ಮರುದಿನದ ಪತ್ರಿಕೆಗಳಲ್ಲಿ ನನ್ನ ಪುಸ್ತಕ ಬಿಡುಗಡೆಯ ಫೋಟೋದಲ್ಲಿ ನಾನಿರಲಿಲ್ಲ. ಆದರೆ ನನಗೆ ವಿಷಾದವಿರಲಿಲ್ಲ. ಅದು ನನ್ನ ಆಯ್ಕೆ ಆಗಿತ್ತು.

ಇನ್ನು 'ಬದುಕು ಬದಲಿಸಬಹುದು' ಅಂಕಣ ಬರಹಕ್ಕೆ ಪ್ರೇರಣೆ, ನಾನು ಕಂಡ ಬದುಕು. ನಾನು ಹುಡುಕಿ ಹೋಗಿ ಭೇಟಿಯಾಗುವ ಸಕಾರಾತ್ಮಕ ವ್ಯಕ್ತಿಗಳು. ಇವರೆಲ್ಲರೂ ನನ್ನ ಒಂದೊಂದು ಲೇಖನದ ವಸ್ತುವಾಗಿ ಮುಗಿದವರಲ್ಲ, ನನ್ನ ಬದುಕಿನುದ್ದದ ಸಂಗಾತಿಗಳು. ಸದಾ ನನಗೆ ಸ್ಫೂರ್ತಿಯ ಸೆಲೆಯಾದವರು.

◆ **ನಿಮ್ಮ ಪ್ರಕಾರ ಕನ್ನಡ ಸಾಹಿತ್ಯಕ್ಕೆ ಲೇಖಕಿಯರು ಕೊಟ್ಟ ಕೊಡುಗೆ ಯಾವುದು?**

ಇತಿಹಾಸದುದ್ದಕ್ಕೂ ಪುರುಷ ಪ್ರಪಂಚದ ಅನುಭವಗಳೇ ಸಾರ್ವತ್ರಿಕವೆಂಬಂತೆ ಅಭಿವ್ಯಕ್ತಗೊಂಡು, ಸ್ತ್ರೀಯರ ಅನಿಸಿಕೆ, ಅನುಭವ, ಸಾಧನೆ ದಾಖಲಾಗದೆ ಏಕಮುಖ ಚರಿತ್ರೆ ನಮ್ಮದಾಗಿತ್ತು. 'ಮಹಿಳೆಯರು ಬರೆದಿರೋದೆಲ್ಲ ಅಡುಗೆ ಮನೆ ಸಾಹಿತ್ಯ' ಎಂದು ಮೂಲೆಗೆ ತಳ್ಳಲಾಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಲೇಖಕಿಯರು ಮತ್ತೊಂದು ಕಣ್ಣ ನೋಟವನ್ನು, ಮತ್ತೊಂದು ಕೋನದ ದೃಷ್ಟಿಯನ್ನು ನೀಡಿ ಇತಿಹಾಸದ ಮೌನಗಳಿಗೆ ಮಾತು ಕೊಟ್ಟರು. ಚರಿತ್ರೆಯಲ್ಲಿ ಮಹಿಳೆ ಅದೃಶ್ಯವಾಗಿದ್ದಳು. ಇದೀಗ ಆಕೆ ತನ್ನ ವ್ಯಕ್ತಿತ್ವವನ್ನು, ಅಸ್ತಿತ್ವವನ್ನು ತನ್ನ ಇರುವನ್ನು ಪ್ರತಿಷ್ಠಾಪಿಸಿದಳು. ಎಲ್ಲಕ್ಕಿಂತ ಮುಖ್ಯವಾಗಿ ಆಕೆ ಪ್ರಧಾನ ಸಂಸ್ಕೃತಿಯನ್ನು ಪ್ರಶ್ನಿಸಿದಳು. ಪ್ರಧಾನ ಸಂಸ್ಕೃತಿಯ ನಿರೀಕ್ಷೆಗಳಂತೆ ನಾವು ಬದುಕಬೇಕಿಲ್ಲ ಎಂದು ತೋರಿಸಿದರು. ಪ್ರಧಾನ ಸಂಸ್ಕೃತಿಯನ್ನು ಪ್ರಶಂಸಿಸಿ ಅನುಮೋದಿಸಿ, ಅನುಕರಿಸಿದ ಸಾಹಿತ್ಯವು ಶ್ರೇಷ್ಠವಾದ ಬಗೆಯನ್ನು, ಲಿಂಗ ರಾಜಕಾರಣವನ್ನು ತೆರೆದಿಟ್ಟರು. ಸಾಹಿತ್ಯ ಚರಿತ್ರೆಯಲ್ಲಿ ಲೆಕ್ಕಕ್ಕೇ ಇಲ್ಲವೆಂಬಂತೆ ಬಿಟ್ಟುಹೋದ ಲೇಖಕಿಯರ ಕೃತಿಗಳ ಪುನರ್ ಮೌಲ್ಯೀಕರಣದ ಪ್ರಯತ್ನವನ್ನು ನಡೆಸಿದರು. ಒಟ್ಟು ಸಾಹಿತ್ಯ ಪ್ರವಾಹದಲ್ಲಿ ದಾಖಲಿಸದೇ ಬಿಟ್ಟು ಹೋದ ಸ್ತ್ರೀ ಸಂವೇದನೆಯ ಅರಿವು ಮೂಡಿಸಿದರು.

ಇಂದು ನಾವಿರುವ 'ಕಾನ್‌ಫ್ಲಿಕ್ಟಿಂಗ್ ನೆರೇಷನ್'ನ ಕಾಲದಲ್ಲಿ ಈ ಬಹುಮುಖ ಚರಿತ್ರೆ, ಪ್ರಶ್ನಿಸುವ ಹಕ್ಕು ಬಹಳ ಮುಖ್ಯವಾದುವು.

◆ **ಬರವಣಿಗೆಗೆ ಸಂಬಂಧಿಸಿದಂತೆ, ಬರೆದದ್ದು ಸಾರ್ಥಕ ಎಂಬ ಗಳಿಗೆಗಳು ಯಾವುವು?**

2007ರ ಅಕ್ಟೋಬರ್ 2ರಂದು ನನ್ನ 'ಯಾದ್ ವಶೇಮ್' ಕಾದಂಬರಿ ಬಿಡುಗಡೆ ಮಾಡಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ದೊರೆಸ್ವಾಮಿ ಪುಸ್ತಕದ ಬಗ್ಗೆ ತುಂಬಾ ಒಳ್ಳೆಯ ಮಾತನಾಡಿ 'ಅದೇನು ಚೆನ್ನಾಗಿ ಬರೆದಿದ್ದೀಯಮ್ಮಾ' ಎಂದಾಗ ಬರೆದದ್ದು ಸಾರ್ಥಕ ಅನಿಸಿತ್ತು. ಈ ಕಾದಂಬರಿಯಲ್ಲಿ ಬರುವ ಬಯಲುಸೀಮೆಯ ಹಳ್ಳಿಗಾಡಿನ ಅನಕ್ಷರಸ್ಥ ಹೆಣ್ಣುಮಕ್ಕಳ ಅನುಭವಗಳನ್ನು, ದಂತಕತೆಗಳನ್ನು ಹಂಚಿಕೊಂಡವರು ನನ್ನಮ್ಮ. ತಾನು ಬೇರಿಳಿಸಿ ನಿಂತಲ್ಲಿಂದ ಅಲುಗಾಡದೆಯೂ, ನನಗೆ ಹಾರಲಿಕ್ಕೆ ರೆಕ್ಕೆ ಕೊಟ್ಟವಳು ಅಮ್ಮ. ಹೀಗಾಗಿ ನಾನು ನನ್ನಮ್ಮನಿಗೆ ಒಂದು ಪುಷ್ಪಮಾಲೆಯನ್ನು ಅರ್ಪಿಸಿ ಕೃತಜ್ಞತೆ ತಿಳಿಸಲು ಇಚ್ಛಿಸುತ್ತೇನೆ ಎಂದು ಹೇಳಿ ವೇದಿಕೆಯಿಂದ